ದರ್ಶನದ ಸಾರ.

ಈ ಎರಡು ಸಿದ್ಧಾಂತಗಳೂ ಅತಿರೇಕದ ಹಾದಿಯನ್ನು ಹಿಡಿಯಲು ಸಾಧ್ಯ; ಹಾಗೆ ಕೆಲವರು ಅತಿರೇಕಕ್ಕೆ ಪಕ್ಕಾಗಿದ್ದಾರೆ ಕೂಡ. ಶರೀರವನ್ನಷ್ಟೆ ನಂಬಿಕೊಂಡು 'ಸುಖಿಸಿದವರು' ಒಂದು ಗುಂಪಿನಲ್ಲಿದ್ದರೆ, ಶರೀರವನ್ನು ತುಚ್ಛೀಕರಿಸಿ 'ಆನಂದಿಸಿದವರು' ಮತ್ತೊಂದು ಗುಂಪಿನವರು. ಈ ಎರಡು ಗುಂಪಿನವರ ಹುಚ್ಚಾಟಗಳನ್ನು ಮೇಲಿನ ಎರಡು ಪದ್ಯಗಳು ನಿರೂಪಿಸಿ, ಅವುಗಳಿಗೆ ತಕ್ಕ ಉತ್ತರವನ್ನು ನೀಡಿದಂತಿವೆ.

ದೇಹವನ್ನು ತುಚ್ಛವಾಗಿ ಕಾಣುವವರಿಗೆ ಉತ್ತರ: 'ಈ ಶರೀರವೇ ಬೋಧಿವೃಕ್ಷ'.
ದೇಹವನ್ನಷ್ಟೆ ಪ್ರೀತಿಸುವವರಿಗೆ ಉತ್ತರ: 'ದಿಟವಾಗಿಯೂ ಬೋಧಿ ಯಾವುದೇ ವೃಕ್ಷವಲ್ಲ'.

ಬೌದ್ಧದರ್ಶನದಲ್ಲಿ 'ಬೋಧಿತತ್ತ್ವ'ಕ್ಕೆ ಮಹತ್ವದ ಸ್ಥಾನವಿದೆ. 'ಬೋಧಿ' ಎಂದರೆ ಅರಿವು; ಜ್ಞಾನ; ಅದೇ ನಿರ್ವಾಣ. ಈ ಅರಿವನ್ನು ಪಡೆಯುವುದೇ ಎಲ್ಲರ ಜೀವನಸಾಫಲ್ಯದ ಗುರಿಯಾಗಿರುವಂಥದ್ದು. ಜೀವನದ ನಶ್ವರತೆಯ ಬಗ್ಗೆ ಸಿದ್ಧಾರ್ಥನಿಗೆ ತಿಳಿವಳಿಕೆ ಉಂಟಾಯಿತು. ಹಾಗಾದರೆ ಜೀವನದ ಉದ್ದೇಶ ಏನು – ಎಂಬ ಪ್ರಶ್ನೆ ಎದುರಾಯಿತು. ಶರೀರಸುಖದಲ್ಲಿಯೇ ಅಷ್ಟು ವರ್ಷಗಳು ಅವನು ಮುಳುಗಿದ್ದ. ಆದರೆ ನಮ್ಮ ದೇಹವನ್ನು ಎಷ್ಟು ಪ್ರೀತಿಸಿದರೂ, ಎಷ್ಟು ಪೋಷಿಸಿದರೂ ಅದು ಉಳಿಯುವಂಥದ್ದಲ್ಲ. ಈ ವಾಸ್ತವವನ್ನು ತಿಳಿದಮೇಲೆಯೇ ಅವನು ಅರಮನೆಯನ್ನು ತೊರೆದದ್ದು. ಮನೆ ಬಿಟ್ಟ ಸಿದ್ಧಾರ್ಥ ಸತ್ಯವನ್ನು ಕಾಣಲು ಕಠಿಣಮಾರ್ಗವನ್ನು ಆಯ್ಕೆ ಮಾಡಿಕೊಂಡ; ದೇಹವನ್ನು ದಂಡಿಸಿದ. ಆದರೆ ಅವನಿಗೆ ಸತ್ಯದ ಸುಳಿವು ಸಿಗಲಿಲ್ಲ. ದೇಹಸುಖದಲ್ಲಿಯೇ ವಿಹರಿಸುತ್ತಿದ್ದಾಗಲೂ ಸತ್ಯದ ಅರಿವು ಉಂಟಾಗಲಿಲ್ಲ; ದೇಹಸುಖವೇ ಬೇಡವೆಂದು ಶಿಕ್ಷಿಸಿಕೊಂಡಾಗಲೂ ಸತ್ಯದ ಮುಖ ಕಾಣಲಿಲ್ಲ. ಈ ಎರಡು ಅತಿರೇಕದ ದಾರಿಯ ನಡುವೆ – ಎಂದರೆ ಮಧ್ಯಮಮಾರ್ಗದಲ್ಲಿದ್ದಾಗಲೇ ಸಿದ್ಧಾರ್ಥನಿಗೆ ಸತ್ಯದ ಅರಿವು ಒದಗಿ, ಅವನು 'ಬುದ್ಧ'ನಾದದ್ದು. ಹೀಗಾಗಿಯೇ ಬುದ್ಧನ ಮಾರ್ಗವನ್ನು 'ಮಧ್ಯಮಮಾರ್ಗ' ಎಂದು ಕರೆಯುವುದು.

ಹೀಗಿದ್ದರೂ ಜೀವನವನ್ನು ಅತಿರೇಕಗಳಲ್ಲಿಯೇ ಕಾಣುವವರ ಸಂಖ್ಯೆ ಕಡಿಮೆಯೇನಿಲ್ಲ; ಹೆಚ್ಚಾಗುತ್ತಲೇ ಇರುತ್ತದೆಯೆನ್ನಿ! ನಮ್ಮ ಕಾಲಕ್ಕೂ ಇದು ಸಲ್ಲುವ ಮಾತು. ಈ ಶರೀರವೇ ಬೇಡ – ಎಂದು ಜೀವನವನ್ನೇ ಧಿಕ್ಕರಿಸಿ ಪ್ರಾಣವನ್ನು ಕಳೆದುಕೊಳ್ಳುವವರು ಒಂದೆಡೆ; ಶರೀರವಷ್ಟೆ ಸಾಕು – ಎಂದು ಭೋಗಭಾಗ್ಯಗಳಲ್ಲಿಯೇ ಮೆರೆಯುತ್ತ ಜೀವನದ ಉದ್ದೇಶವನ್ನೇ ಮರೆಯುತ್ತಿರುವವರು ಮತ್ತೊಂದೆಡೆ. ಈ ಎರಡು ಅತಿರೇಕ ಪ್ರವೃತ್ತಿಗಳು ನಮಗೆ ಅಂಟಿದ ಶಾಪಗಳೇ ಸರಿ.

ಇಲ್ಲಿ 'ಶರೀರ' ಎನ್ನುವುದು ನಮ್ಮ ಕಣ್ಣಿಗೆ ಕಾಣುವ ಜಗತ್ತಿಗೆ ರೂಪಕ. ನಮಗೆ ಏನು ಕಾಣುತ್ತಿದೆಯೋ ಅದಷ್ಟೆ ಜಗತ್ತು ಎನ್ನುವ ಅಹಂಕಾರದ ದೃಷ್ಟಿ ನಮ್ಮದು. ನಮಗೆ ಕಾಣದ ಜಗತ್ತೂ ಉಂಟು. ಇಷ್ಟಕ್ಕೂ ನಮ್ಮ ಕಣ್ಣಿನ ಶಕ್ತಿಯಾದರೂ ಎಷ್ಟು? ಕಣ್ಣಿಗೆ ಕಾಣದ ವಿವರಗಳು ವಿಶ್ವದಲ್ಲಿ ಸಾಕಷ್ಟಿವೆ. ಹೀಗಾಗಿ ಜಗತ್ತನ್ನು ಕಾಣುವ ನಮ್ಮ ನೋಟ ವಿಶಾಲವಾಗಬೇಕಿದೆ; ಜೀವನವನ್ನು ಅನುಭವಿಸುವ ನಮ್ಮ ಅಭಿರುಚಿಯೂ ಸೂಕ್ಷ್ಮವಾಗಬೇಕಿದೆ. ಇದನ್ನು ಹೇಳಲು ಹೊರಟಿರುವ ಮಾತು: 'ದಿಟವಾಗಿಯೂ ಬೋಧಿ ಯಾವುದೇ ವೃಕ್ಷವಲ್ಲ.' ಈ ಮಾತು ಹುಟ್ಟಿಕೊಂಡದ್ದು 'ಈ ಶರೀರವೇ ಬೋಧಿವೃಕ್ಷ' – ಎನ್ನುವ ಸೂತ್ರದ ಒಳಾರ್ಥವು ಕಳೆದುಕೊಂಡು, ಮೇಲ್ಪದರದ ಅರ್ಥವಷ್ಟೆ ಸ್ಥಾಪಿತವಾದಾಗ.